ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) :- ಸನ್ಮಾನ್ಯ ಅಧ್ಯಕ್ಷರೆ, ಆ ರಸ್ತೆಯಲ್ಲಿ ಟ್ರಾಫಿಕ್ಸ್ ಏನಾದರೂ ಜಾಮ್ ಆದರೆ ಅದು ಕ್ಲಿಯರ್ ಆಗಬೇಕು ಎಂದರೆ ಸುಮಾರು ನಾಲ್ಕು ಗಂಟಗಳ ಕಾಲಾವಕಾಶ ಬೇಕಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಸಹ ತುರ್ತಾಗಿ ಕ್ರೇನ್ ಕೊಡುತ್ತೇವೆ ಎಂದು ತಿಳಿಸಿದ್ದರು. ಆದರೆ ಅವರು ಸತ್ಯಕ್ಕೆ ದೂರವಾದುದನ್ನು ಹೇಳುತ್ತಿದ್ದಾರೆ. ಆದರೆ ಈಗಲಾದರೂ ಮಂತ್ರಿಗಳು ಇದರ ಬಗ್ಗೆ ನಿಖರವಾದ ಉತ್ತರವನ್ನು ಹೇಳಬೇಕೆಂದು ತಮ್ಮ ಮುಖಾಂತರ ಕೇಳಬಯಸುತ್ತೇನೆ.

ಅಧ್ಯಕ್ಷರು :- ಸನ್ಮಾನ್ಯ ಮಂತ್ರಿಗಳು ನಿಖರವಾಗಿ ಹೇಳಿದ್ದಾರಲ್ಲಾ.

ಶ್ರೀ ಎಂ.ಸಿ. ನಾಣಯ್ಯ :- ರಸ್ತೆ ಸಂಚಾರ ಇಲ್ಲ ಎಂದರೆ ಅಪಘಾತಗಳು ಸಹ ಕಡಿಮೆ ಆಗುತ್ತವೆ.

(ಊ) <u>ಕರಾವಳಿಯ ಭಾಗಗಳಲ್ಲಿ ಪಂಪುಸೆಟ್ಟುಗಳಿಗೆ ವಿದ್ಯುತ್ ಕಡಿತ.</u>

ಶ್ರೀ ಡಿ. ವಿ. ಸದಾನಂದ ಗೌಡ (ಪುತ್ತೂರು) :- ಸನ್ಮಾನ್ಯ ಸಭಾಧ್ಯಕ್ಷರೆ, ಕಳೆದ ವಾರ ಕೆ ಇ ಬಿ ಬಗ್ಗೆ ನಾವು ದೀರ್ಘವಾಗಿ ಪ್ರಸ್ತಾಪ ಮಾಡಿದ್ದೇವೆ. ಆದರೆ ಈಗ ಒಂದು ಹೊಸ ಸಂಗತಿ ಪ್ರಾರಂಭವಾಗಿದೆ. ಕರಾವಳಿಯ ಎಲ್ಲಾ ಭಾಗಗಳಲ್ಲಿ, ಹಾಗೂ ಶಿವಮೊಗ್ಗದ ಎಲ್ಲಾ ಭಾಗಗಳಲ್ಲಿ ಇದ್ದಕ್ಕಿದ್ದಂತೆ ಕೆ ಇ ಬಿ ರೈತರ ಪಂಪು ಸೆಟ್ಟುಗಳ ವಿದ್ಯುತ್ ಸಂಪರ್ಕ ಕಡಿತ ಮಾಡುವಂತಹ ಒಂದು ಅಭ್ಯಾಸ ಪ್ರಾರಂಭವಾಗಿದೆ. ಪಂಪು ಸೆಟ್ಟುಗಳ ವಿದ್ಯುತ್ ಶುಲ್ಕ ಎಷ್ಟು ಕಟ್ಟಬೇಕು ಎಂದು ತಿಳಿಸದೆ, ಅಥವಾ ಅವರಿಗೆ ನೋಟೀಸ್ ಜಾರಿ ಮಾಡದೆ, ಹಣ ಕಟ್ಟುವುದಕ್ಕೆ ಯಾವುದೇ ರೀತಿಯಾದಂತಹ ಸೂಚನೆ ನೀಡದೆ ಅವರು ಪಂಪು ಸೆಟ್ಟುಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದಾರೆ. ಇದು ಎಲ್ಲಿಯವರಿಗೆ ಬಂದಿದೆ ಎಂದರೆ, ಬಹುಶ: ಸರ್ಕಾರದವರು ಒಳ್ಳೆಯದು ಮಾಡಿದ್ದಾರೆ. ನಮ್ಮ ಮುಖ್ಯ ಸಚೇತಕರಾದ ಶ್ರೀ ವಸಂತ ಬಂಗೇರ ಅವರ ಪಂಪು ಸೆಟ್ಟಿಗೂ ಸಹ ಡಿಸ್ ಕನೆಕ್ಟ್ ಆರ್ಡರ್ ಬಂದಿದೆ. ಒಳ್ಳೆಯ ಕೆಲಸ ಮಾಡಿದ್ದಾರೆ, ನಾನು ಇಲ್ಲ ಎಂದು ಹೇಳುತ್ತಿಲ್ಲ. ಆದರೆ ಈ ಸಂದರ್ಭದಲ್ಲಿ ಮಾಡಬಾರದು. ಶ್ರೀ ವಸಂತ ಬಂಗೇರ ಅವರಿಗೆ ಬೇಕಾದರೆ ಮಾಡಲಿ, ನನ್ನದೇನೂ ಅಭ್ಯಂತರವಿಲ್ಲ. ಆದರೆ ದಕ್ಷಿಣ ಕನ್ನಡ ಮತ್ತು ಶಿವಮೊಗ್ಗದ ಭಾಗದಲ್ಲಿರುವ ರೈತರಿಗೆ ವಿದ್ಯುತ್ ಕಡಿಗೊಳಿಸುವ ಒಂದು ಅಭ್ಯಾಸ ಏನು ಪ್ರಾರಂಭ ಮಾಡಿದ್ದಾರೆ, ಇದನ್ನು ತಕ್ಷಣ ನಿಲ್ಲಿಸಬೇಕು. ಅಲ್ಲದೆ ರೈತರಿಗೆ 24 ಪರ್ಸೆಂಟ್ ಬಡ್ಡಿಯನ್ನು ವಸೂಲಿ ಮಾಡುತ್ತಾರೆ. ದಯವಿಟ್ಟು ಬಡ್ಡಿಯನ್ನು ವಸೂಲಿ ಮಾಡುವುದು ನಿಲ್ಲಿಸಬೇಕು, ಮತ್ತು ವಿದ್ಯುತ್ ಡಸ್ ಕನೆಕ್ಟ್ ಮಾಡುವ ಆರ್ಡರ್ ತಕ್ಷಣ ನಿಲ್ಲಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :- ಒಂದು ವಿಷಯವನ್ನು ತಾವು ಒಪ್ಪುವಿರಾ? ಅವರು ಅಭಿಯಾನ ಪ್ರಾರಂಭ ಮಾಡಿರುವುದರಿಂದ ನಿಮಗೆ ಬಹಳ ಪ್ರಯೋಜನವಾಗಿದೆ. ಅವರಿಗೆ ನೀವು ಋಣಿಯಾಗಿರಬೇಕು.

ಶ್ರೀ ಡಿ.ವಿ. ಸದಾನಂದ ಗೌಡ :- ಅದನ್ನು ನಾನು ಒಪ್ಪುತ್ತೇನೆ. ಅಧ್ಯಕ್ಷರೆ, ರಾಜ್ಯಕ್ಕೇನೋ ಈಗ ಲಾಭವಾಗಿರಬಹುದು, ಆದರೆ ಜನತೆಗೆ ತೊಂದರೆಯಾಗುತ್ತಿದೆ. ನಮಗೆ ಲಾಭ ಆಗದಿದ್ದರೂ ಪರವಾಗಿಲ್ಲ, ಆದರೆ ರೈತಾಪಿ ವರ್ಗದವರಿಗೆ ತೊಂದರೆ ಆಗದ ರೀತಿಯಲ್ಲಿ ಕೆಲಸ ಮಾಡಬೇಕೆಂದು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ :- ಸನ್ಮಾನ್ಯ ಸಭಾಧ್ಯಕ್ಷರೆ, ಪಂಪ್ ಸೆಟ್ಟುಗಳಿಗೆ ದರವನ್ನು ನಿಗದಿ ಮಾಡಿದ್ದೇವೆ. 500 ರೂಪಾಯಿ ಇದ್ದ ದರವನ್ನು 300 ರೂಪಾಯಿಗೆ ಇಳಿಸಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅದರ ಆರ್ಡರ್ ಇನ್ನೂ ಹೋಗಿಲ್ಲ.

ಅಧ್ಯಕ್ಷರು :- ಪೋಸ್ಟಲ್ ಡಿಲೇ ಆಗಿದೆ ಎಂದು ಕಾಣಿಸುತ್ತದೆ. ಹೋಗುತ್ತದೆ ಬಿಡಿ.

ಶ್ರೀ ಎಂ.ಸಿ. ನಾಣಯ್ಯ :- ಒಂದು ಹೆಚ್ ಪಿಗೆ 500 ರೂಪಾಯಿ ಇದ್ದಿದ್ದು 300 ರೂಪಾಯಿ ಆಗಿದೆ. ಬಹುಶ: ಬಾಕಿ ಇರತಕ್ಕಂತಹ ಸಂದರ್ಭದಲ್ಲಿ 1.45 ಪೈಸೆ ಒಂದುಯೂನಿಟ್‌ಗೆ, ಕಟ್ಟಬೇಕಾಗುತ್ತದೆ. ಅದೂ ಮೀಟರ್ ಬೇಕಾ ಬೇಡವೇ ಎಂಬುದನ್ನು ಈ ಸದನದಲ್ಲಿ ಚರ್ಚೆ ಮಾಡಿದ್ದೀರಿ, ಸರ್ಕಾರ ಇದನ್ನು ಪರಿಶೀಲನೆ ಮಾಡುತ್ತದೆ ಎಂಬ ಮಾತನ್ನು ಸಹ ನಾವು ಹೇಳಿದ್ದೇವೆ. ಆದರೆ ಅವರು ಕಟ್ಟಬೇಕಾಗಿರುವಂತಹ ಹಣವನ್ನು ಕಟ್ಟದೆ ಹೋದರೆ ಹೇಗೆ? ಮಾನ್ಯ ಸಭಾಧ್ಯಕ್ಷರೆ, ನಮ್ಮಲ್ಲಿ ಎಲ್ಲಾ ಪುಕ್ಕಟೆಯಾಗಿ ಆಗಬೇಕು ಎಂದು ಹೇಳುವುದು ಸರಿ ಅಲ್ಲ. ಡಿಸ್ ಕನೆಕ್ಷನ್ ಏಕೆ ಆಗುತ್ತದೆ ಎಂದು ನಾನು ಹೇಳುತ್ತೇನೆ. ಏಕೆಂದರೆ, ನೀವು ಉಪಯೋಗಿಸಿರುವಂತಹ ವಿದ್ಯುತ್‌ಗೆ, ವಿದ್ಯುತ್ ದರ ಕಟ್ಟದೆ ಹೋದರೆ ಹೇಗೆ? ನೀವು ಕಟ್ಟದೆ ಹೋದರೆ ಕೆ ಇ ಬಿ ನಡೆಸುವುದಾದರೂ ಹೇಗೆ?

ಶ್ರೀ ಡಿ.ವಿ. ಸದಾನಂದ ಗೌಡ :- ನೀವು ಡಿಸ್‌ಕನೆಕ್ಟ್ ಮಾಡುವುದಾದರೆ ನೋಟೀಸ್ ಕೊಡಬೇಕು.

ಶ್ರೀ ಎಂ.ಸಿ. ನಾಣಯ್ಯ :- ಒಂದು ವಿಷಯವನ್ನು ತಮಗೆ ಹೇಳುತ್ತೇನೆ, ಡಿಸ್ ಕನೆಕ್ಷನ್‌ಗೆ ನೋಟೀಸ್ ಕೊಡಬೇಕಾದ ಅವಶ್ಯಕತೆ ಇಲ್ಲ. The moment you become defaulter, automatically the disconnection takes place. ಟಿಲಿಫೋನ್ ಬಿಲ್ ಕಟ್ಟದೆ ಹೋದರೆ ನಿಮಗೆ ನೋಟೀಸ್ ಕೊಡುತ್ತಾರೆಯೇ ಕೊಡುವುದಿಲ್ಲ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ಈಗ ನೀವು ಪೂರ್ಣ ಪ್ರಮಾಣದ ವಿದ್ಯುತ್ ಕೊಟ್ಟರೆ ನೀವು ಹೇಳುವ ಮಾತು ಸತ್ಯ. ಆದರೆ ಕೊಡದೇ ಇರುವಂತಹ ವಿದ್ಯುತ್‌ಗೆ 300 ರೂಪಾಯಿ ಕೊಡೆ ಅಂದರೆ ಹೇಗೆ? ಟಿಲಿಫೋನ್ ಅನುಕೂಲ ಇಲ್ಲ ಎಂದಾಗ ಟಿಲಿಫೋನ್ ಬಿಲ್ ಹೇಗೆ ಕಟ್ಟುವುದಕ್ಕೆ ಸಾಧ್ಯ ? ತಾವು ದಯವಿಟ್ಟು ತಿಳಿಸಬೇಕು.

ಶ್ರೀ ಎಂ.ಸಿ. ನಾಣಯ್ಯ :- ಡಿಸ್‌ಕನೆಟ್ಟ್ ಆದ ಕೂಡಲೇ ಒಂದು ಅರ್ಜಿಯನ್ನು ಸಲ್ಲಿಸಿ, ನಮಗೆ ಕರೆಂಟ್ ಬರುತ್ತಿಲ್ಲ, ಕನೆಕ್ಷನ್ ಕೊಟ್ಟಿರುವಂತಹದ್ದನ್ನು, ಡಿಸ್‌ಕನೆಕ್ಟ್ ಮಾಡಿ ಎಂದು ನೀವೇ ಹೇಳಿಬಿಡಿ. ಮುಗಿದೇ ಹೋಯಿತಲ್ಲಾ?

ಅಧ್ಯಕ್ಷರು :- ಸನ್ಮಾನ್ಯ ಶ್ರೀ ನಾಣಯ್ಯನವರ ಇಲಾಖೆ ಅಲ್ಲದೆ ಇದ್ದರೂ ಸಹ ಸರ್ಕಾರದ ಪರವಾಗಿ ಅವರು ಉತ್ತರ ಕೊಟ್ಟಿದ್ದಾರೆ. ಆನಂತರ ಅದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ಎಂ. ಸಿ . ನಾಣಯ್ಯ :- ನಿಜವಾಗಿ ವಿದ್ಯುಚ್ಛಕ್ತಿ ಬಗ್ಗೆ ಜನರಿಗೆ ಆಗುತ್ತಿರುವಂತಹ ತೊಂದರೆ ಬಗ್ಗೆ ನಮಗೆ ಗೊತ್ತಿದೆ.

ಮಾನ್ಯ ಸದಸ್ಯರು :- ವಿದ್ಯುಚ್ಛಕ್ತಿ ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎಂ.ಸಿ. ನಾಣಯ್ಯ :- ವೋಲ್ಟೇಜ್ ಕಡಿಮೆಯಾಗಿದೆ.

Mr. Speaker :- Let us not mess. ಅದು ಇಡೀ ದಿವಸ ಆಗುತ್ತದೆ.

ಶ್ರೀ ಎಂ.ಸಿ. ನಾಣಯ್ಯ :- ಸನ್ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸರ್ಕಾರದ ಮಟ್ಟದಲ್ಲಿ ಮತ್ತು ಕೆಇಬಿ ಮಟ್ಟದಲ್ಲಿ ಒಂದು ಚರ್ಚೆ ಮಾಡಿ, ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಎಲ್ಲರ ಸಹಕಾರವನ್ನು ಸಹ ನಾನು ಕೇಳುತ್ತೇನೆ. ನಾವೆಲ್ಲರೂ ಸೇರಿ ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳೋಣ.

ಅಧ್ಯಕ್ಷರು :- ಶ್ರೀಮತಿ ಪ್ರಮೀಳಾ ನೇಸರ್ಗಿ ಅವರು ಬಂಬೂ ಬಜಾರಿನಲ್ಲಿ ಆದ ಬೆಂಕಿ ಅನಾಹುತದ ಬಗ್ಗೆ ತಿಳಿಸಿ.

(ಎ) <u>ಬೆಂಗಳೂರಿನ ಸಿಟಿ ಮಾರ್ಕೆಟ್ಟಿನ ಬಳಿ ಇರುವ ಬಂಬೂ ಬಜಾರ್‌ನಲ್ಲಿ ಬೆಂಕಿ ಅನಾಹುತ.</u>

★ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜ ಪೇಟೆ) :- ಸನ್ಮಾನ್ಯ ಅಧ್ಯಕ್ಷರೆ, ಚಾಮರಾಜ ಪೇಟೆ ಕ್ಷೇತ್ರದಲ್ಲಿ ಸಿಟ್ಟಿ ಮಾರ್ಕೆಟ್ ಹತ್ತಿರವಿರುವ ಬಂಬೂ ಬಜಾರ್ ಬಹಳ ಜನನಿಬಿಡವಾದಂತಹ ಸ್ಥಳ. ಅಲ್ಲಿ ಈ ಬೆಂಕಿ ಅನಾಹುತ ಆಗಿರುವುದು ಇದು 6ನೆಯ ಭಾರಿ. ಒಂದು ಸಾರಿ ಬೆಂಕಿ ಅನಾಹುತದಲ್ಲಿ ಫೈರ್ ಬ್ರಿಗೇಡ್ ಆಫೀಸರ್ ಸಹ ಸತ್ತಿದ್ದಾರೆ. ಆದರೂ ಸಹ ಇದರ ಬಗ್ಗೆ ಯಾವುದೇ ರೀತಿಯಾದಂತಹ ಪ್ರಿಕಾಷನರಿ ಸ್ಟೆಪ್ ತೆಗೆದುಕೊಂಡಿಲ್ಲ. ಕಳೆದ ಗುರುವಾರದಂದು ಸಾಯಂಕಾಲ ಎಂಟೂವರೆ ಗಂಟೆಯ ಸಮಯದಲ್ಲಿ ಹೊತ್ತಿಕೊಂಡಂತಹ ಬೆಂಕಿ ಎರಡು ಅಂಗಡಿಗಳನ್ನು ಸುಟ್ಟಿದೆ. ಆದರೆ ಇದರ ಬಗ್ಗೆ ಯಾರೂಸಹ ಗಮನ ಪರಿಸ್ಥಿತಿ ಮುಂದುವರೆದಿದೆ ಮುಂಬರುವ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಬೇಸಿಗೆ ಕಾಲದಲ್ಲಿ ಪುನ: ಬೆಂಕಿ ಅನಾಹುತ ಆಗುವಂತಹ ಸಂದರ್ಭ ಇದೆ. ನಾನು ಈಗಾಗಲೇ ಇದನ್ನು ಶಿಫ್ಟ್ ಮಾಡಿ ಎಂದು ಕೇಳಿದ್ದೆ. ಇಲ್ಲಿ ಇರುವಂತಹ ಎಲ್ಲಾ ವ್ಯಾಪಾರಸ್ಥರಿಗೂ 5 ಎಕರೆ ಜಾಗವನ್ನು ಬೇರೆ ಎಲ್ಲಾದರೂ ಕೊಟ್ಟರೆ, ಬಹುಶ: ಅವರು ಶಿಫ್ಟ್ ಮಾಡುವುದಕ್ಕೆ ತಯಾರಿದ್ದಾರೆ. ಎಲ್ಲಾ ವ್ಯಾಪಾರಸ್ಥರೂ ಕೂಡ ಒಂದು ಮೀಟಿಂಗ್ ಮಾಡಿ, ನಾವು ಹೋಗುವುದಕ್ಕೆ ತಯಾರಿದ್ದೇವೆ, ಅದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿದ್ದಾರೆ. ಆದರೆ ಆ ಕ್ರಮವನ್ನೂ ಸಹ ತೆಗೆದುಕೊಂಡಿಲ್ಲ. ಅಲ್ಲಿ ಎನಾಗಿದೆ ಅಂದರೆ, ಪಕ್ಕದಲ್ಲಿ ಇರುವಂತಹ ಹೋಟೆಲ್‌ಗಳಲ್ಲಿ ಆರಿಸದೇ ಇರುವಂತಹ ಕೆಂಡಗಳನ್ನು ತಂದು ಅಲ್ಲೇ ಹಾಕುತ್ತಾರೆ. ಅಲ್ಲಿ ತೊಟ್ಟಿ ಇದ್ದುದ್ದನ್ನೂ ಸಹತೆಗೆದು ಹಾಕಿದ್ದಾರೆ; ಆದರಿಂದ ಬೆಂಕಿ ಅನಾಹುತವಾಗಿದೆ ಎಂದು ಹೇಳಿದ್ದಾರೆ. ಅಷ್ಟೇ ಅಲ್ಲ, ಅಲ್ಲಿ ಒಂದು ಸಾರಾಯಿ ಅಂಗಡಿ ಇದೆ. ಜನ ಆ ಸಾರಾಯಿ ಅಂಗಡಿಯಲ್ಲಿ ಕುಡಿದು, ರೋಡಿನಲ್ಲಿ ಉರುಳಿಕೊಂಡು ಬಂದು ಈ ಬಂಬೂ ಬಜಾರಿನಲ್ಲಿ ಬೀಳುತ್ತಾರೆ. ಈ ಬೊಂಬು ಬಜಾರ್ ಪಕ್ಕದಲ್ಲೇ 10- 12 ಮೊಬೈಲ್ ಕ್ಯಾಂಟೀನ್‌ಗಳು ಇವೆ. ಅಲ್ಲೇ ಸೀಮೆ ಎಣ್ಣೆ ಇಟ್ಟು ಕೊಂಡು ವ್ಯಾಪಾರ ಮಾಡುತ್ತಾರೆ. ಇದರಿಂದ ಪರಿಸ್ಥಿತಿ ಏನಾಗಿದೆ ಎಂದರೆ, ಈ ರೋಡಿನಲ್ಲಿ ಕ್ಲೀನ್ ಲೀನೆಸ್ ಇಲ್ಲ, ವಾಟರ್ ಕನೆಕ್ಷನ್ ಎಲ್ಲವನ್ನೂ ಕ್ಲೋಸ್ ಮಾಡಿದ್ದಾರೆ. ಆದುದರಿಂದ ಈ ಪರಿಸ್ಥಿತಿ ಉಂಟಾಗಿದೆ. ಆದುದರಿಂದ ಈ ಸರ್ಕಾರ ಗಮನ ಹರಿಸಿ ಇದನ್ನು ಪರಿಹರಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಾರೆ, ಯಾವ ರೀತಿ ಮಾಡುತ್ತಾರೆ ಎಂಬುದನ್ನು ತಿಳಿಸಬೇಕು. ಸನ್ಮಾನ್ಯ ರೋಷನ್ ಬೇಗ್ ಅವರು ಕಳೆದ ಬಾರಿ ಬಂದಿದ್ದರು. ಆದರೆ ಮೊನ್ನೆ ದಿವಸ ಬೆಂಕಿ ಅನಾಹುತ ಆದಾಗ ಬರಲಿಲ್ಲ, ಕಾರಣ ತಿಳಿಯಲಿಲ್ಲ. ಸನ್ಮಾನ್ಯ ಅನಂತ್‌ನಾಗ್ ಅವರು ಸಹ ಬರಲಿಲ್ಲ. ರಾತ್ರಿ ಹನ್ನೆರಡು ಗಂಟೆಯ ಸಮಯದಲ್ಲಿ ನಾನು ಹೋಗಿದ್ದೆ, ತಕ್ಷಣ ಫೈರ್ ಬ್ರಿಗೇಡ್‌ನವರು ಬಂದು ಆ ಬೆಂಕಿಯನ್ನು ಆರಿಸದೇ ಹೋಗಿದ್ದರೆ ಅಲ್ಲಿ ಇನ್ನು ಸುಮಾರು 50 ಅಂಗಡಿಗಳವರೆವಿಗೆ ಆ ಬೆಂಕಿ ಬರುತ್ತಿತ್ತು.